ಅಧ್ಯಕ್ಷರು: ನಾನು ಒಪ್ಪಿದ್ದೇನೆ; ಇವತ್ತೇ ಆದರೆ ತೆಗೆದುಕೊಳ್ಳೋಣ. ಒಂದು ವೇಳೆ ಸಮಯಾವಕಾಶ ಆಗದಿದ್ದರೆ ನಾಳೆ ತೆಗೆದುಕೊಳ್ಳೋಣ. ನಾನೇ ವಾಲಂಟರಿಯಾಗಿ ಹೇಳಿದ್ದೇನೆ; Because it is a very serious matter. I have also asked him the basis.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ತಾವು ಅವರಿಗೆ ಮಾತನಾಡಲಿಕ್ಕೆ ಅವಕಾಶ ಕೊಟ್ಟಿದ್ದೀರಿ. ಇದರಲ್ಲಿ ಅವರು ಒಬ್ಬರೇ ಮಾತನಾಡುವವರು. ಆದ್ದರಿಂದ ಕೂಡಲೇ ತೆಗೆದುಕೊಳ್ಳಿ ಎಂಬುದು ನಮ್ಮ ಮನವಿ.

ಅಧ್ಯಕ್ಷರು: ಇದು ಬಹಳ ಮಹತ್ವದ ವಿಚಾರ ಎಂದು ಹೇಳಿ ನಾನೇ ಸ್ವಯಂ ಪ್ರೇರಿತನಾಗಿ ಒಪ್ಪಿಕೊಂಡಿದ್ದೇನೆ. ಕೂಡಲೇ ಚರ್ಚೆಗೆ ತೆಗೆದುಕೊಳ್ಳುತ್ತೇನೆ.

ಈ) ಮಂಗಳೂರು ದಕ್ಷಿಣ ಕನ್ನಡ ಜಿಲ್ಲೆ ಹಾಗೂ ಉಡುಪಿ ದಕ್ಷಿಣ ಕನ್ನಡ ಜಿಲ್ಲೆ ಎಂದು ಹೆಸರಿಡುವ ಬಗ್ಗೆ.

ಶ್ರೀ ಎಂ.ವೀರಪ್ಪ ಮೊಯಿಲಿ (ಕಾರ್ಕಳ): ಮಾನ್ಯ ಅಧ್ಯಕ್ಷರೆ, ಇವತ್ತು ದಕ್ಷಿಣ ಕನ್ನಡ ಜಿಲ್ಲೆ ಎರಡು ಜಿಲ್ಲೆಗಳಾಗಿ ವಿಂಗಡಿಸಲ್ಪಟ್ಟಿದೆ. ಅದು ದಕ್ಷಿಣ ಕನ್ನಡ ಜಿಲ್ಲೆ ಮತ್ತು ಉಡುಪಿ ಜಿಲ್ಲೆ ಎಂದು. ಇವತ್ತು ದಕ್ಷಿಣ ಕನ್ನಡ ಜಿಲ್ಲೆ ಎಂದು ಯಾವ ಒಂದು ಭಾವನಾತ್ಮಕ, ಸಾಂಸ್ಕೃತಿಕ, ಆರ್ಥಿಕ ಮತ್ತು ಸಾಮಾಜಿಕವಾದ ಭಾವನೆಗಳಿವೆ, ಆ ಒಂದು ಪರಂಪರೆಯ ಕೊಂಡಿ ಇದೆ ಅದು ಸ್ವಲ್ಪ ಕಳಚಿ ಹೋಗುತ್ತದೆ. ಅದಕ್ಕೆ ಜಿಲ್ಲಾ ಪಂಚಾಯಿತಿ ಒಂದು ಅವಿಭಾಜ್ಯ ಅಂಗವಾಗಿ, ಜಿಲ್ಲಾ ಪಂಚಾಯಿತಿ ಸರ್ವಾನುಮತದಿಂದ ಏನು ಒಂದು ನಿರ್ಣಯ ಮಾಡಿದೆ ಎಂದರೆ, ಮಂಗಳೂರು ದಕ್ಷಿಣ ಕನ್ನಡ ಜಿಲ್ಲೆ, ಉಡುಪಿ ದಕ್ಷಿಣ ಕನ್ನಡ ಜಿಲ್ಲೆ ಎಂದು ವಿಂಗಡಿಸಲಾಗಿದೆ. ಎಲ್ಲಾ ಪಕ್ಷದವರು ಅವಿಭಾಜ್ಯವಾಗಿ ಈ ರೀತಿ ನಿರ್ಣಯ ಮಾಡಿದ್ದಾರೆ. ಈ ಬೇಡಿಕೆ ಸಾರ್ವತ್ರಿಕವಾಗಿ ಇವತ್ತು ಬರುತ್ತಿದೆ. ಆದುದರಿಂದ ಭಾವನಾತ್ಮಕವಾಗಿ ಆ ಜಿಲ್ಲೆಯ ವಿಂಗಡಣೆ ಆಡಳಿತದ ದೃಷ್ಟಿಯಿಂದ ಚಿಕ್ಕ ಜಿಲ್ಲೆ ಆಗಬೇಕೆಂದು ಹೇಳುವುದು ಸೂಕ್ತವಾಗಿದೆ. ಆದರೆ ಹೆಸರಿಸುವಾಗ ಮಾತ್ರ ಅದು ಉಡುಪಿ ಜಿಲ್ಲೆ ಅಥವಾ ದಕ್ಷಿಣ ಕನ್ನಡ ಜಿಲ್ಲೆ ಎಂದು ಮಾರ್ಪಡಿಸಿದರೆ ಭಾವನಾತ್ಮಕವಾದ ಆಘಾತ ಆ ಜಿಲ್ಲೆಯವರಿಗೆ ಆಗುತ್ತದೆ. ಆ ಕಾರಣದಿಂದ ದಯಮಾಡಿ, ಮಾನ್ಯ ಕಂದಾಯ ಮಂತ್ರಿಗಳು ಆ ಪ್ರದೇಶದಲ್ಲಿರತಕ್ಕ ಜನರ ಭಾವನೆಗಳು ಏನಿವೆ ಅವನ್ನು ಗ್ರಹಿಸಿ ಅದಕ್ಕೆ ಸ್ಪಂದಿಸಿ ಈ ಜಿಲ್ಲೆಗಳನ್ನು ಮಂಗಳೂರು ದಕ್ಷಿಣ ಕನ್ನಡ ಜಿಲ್ಲೆ ಮತ್ತು ಉಡುಪಿ ದಕ್ಷಿಣ ಕನ್ನಡ ಜಿಲ್ಲೆ ಎಂದು ಹೆಸರಿಸತಕ್ಕ ಕೆಲಸವನ್ನು ತಕ್ಷಣ ಮಾಡಬೇಕು. ಏಕೆಂದರೆ ಜಿಲ್ಲಾಪಂಚಾಯಿತಿ, ಉಡುಪಿ ಕಳೆದ ವಾರ ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಚುನಾವಣೆ ನಡೆಸಿದೆ. ಸಧ್ಯದಲ್ಲೇ ಮತ್ತೆ ಚುನಾವಣೆ ಆಗುತ್ತಿದೆ. ಆದ್ದರಿಂದ ತಕ್ಷಣ ತಾವು ಹೆಸರಿಸದೆ ಇದ್ದರೆ ಇದಕ್ಕೆ ಬೇರೆ ತಾಂತ್ರಿಕ ತೊಂದರೆಗಳು ಬರುವ ಕಾರಣ ಈ ಬಗ್ಗೆ ತಕ್ಷಣ ಕಾರ್ಯಕ್ರಮ

ತೆಗೆದುಕೊಳ್ಳಬೇಕೆಂದು ತಮ್ಮ ಮೂಲಕ ಮಾನ್ಯ ಕಂದಾಯ ಸಚಿವರನ್ನು ಪ್ರಾರ್ಥಿಸುತ್ತೇನೆ.

ಮಾನ್ಯ ಸದಸ್ಯರು: ಅದಕ್ಕೆ ನಮ್ಮೆಲ್ಲರ ಒಪ್ಪಿಗೆ ಇದೆ.

ಶ್ರೀ ಬಿ. ಸೋಮಶೇಖರ್ (ಕಂದಾಯ ಸಚಿವರು): ಮಾನ್ಯ ಅಧ್ಯಕ್ಷರೆ, ಎರಡು ಜಿಲ್ಲೆಗಳನ್ನು ಈ ರೀತಿ ಹೆಸರಿಸಬೇಕೆಂದು ಆ ಎರಡು ಜಿಲ್ಲೆಗಳ ಸಾರ್ವಜನಿಕರ ಅಭಿಪ್ರಾಯ ಇದ್ದರೆ ಮತ್ತು ತಾವೆಲ್ಲರೂ ಒಪ್ಪುವುದಾದರೆ ಸರ್ಕಾರ ಸಹಾನುಭೂತಿಯಿಂದ ಪರಿಶೀಲನೆ ಮಾಡಿ ಆದಷ್ಟು ಬೇಗ ತೀರ್ಮಾನ ತೆಗೆದುಕೊಳ್ಳುತ್ತದೆ.

ಊ) ದ.ಕ. ಜಿಲ್ಲೆಯ ರೇಷನ್ ಅಂಗಡಿಗಳಲ್ಲಿ ಗೋಧಿ ಹಂಚಿಕೆಯ ಪ್ರಮಾಣದಲ್ಲಿ ಇಳಿತ.

ಶ್ರೀ ಕುಂಬಳೆ ಸುಂದರ್‌ರಾವ್ (ಸೂರತ್‌ಕಲ್): ಮಾನ್ಯ ಅಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆಯ ರೇಷನ್ ಅಂಗಡಿಗಳಲ್ಲಿ ಗೋಧಿ ವಿತರಣೆ ಒಂದು ರೀತಿ ಸಂಕುಚಿತಗೊಂಡಿದೆ. ಚುನಾವಣಾ ದಿನಗಳಲ್ಲಿ ಗೋಧಿ ಸಿಗುತ್ತಿತ್ತು. ಅದರ ಹಿಂದೆ 5ರಿಂದ 7 ಕಿಲೋ ಗೋಧಿ ಸಿಗುತ್ತಿತ್ತು. ಈಗ ಅದು ಎರಡು ಕಿಲೋಗೆ ಇಳಿದಿದೆ. ನಮ್ಮ ಆಹಾರ ಪದ್ಧತಿಯಲ್ಲಿ ಬದಲಾವಣೆ ಮಾಡಿದ್ದನ್ನು ನಾವು ಗಮನಿಸಿದ್ದೇವೆ. ನಾವು ಉತ್ತರ ಭಾರತದವರನ್ನು ಅನುಸರಿಸುತ್ತಿದ್ದೇವೆಂದು ಅಲ್ಲ. ಗೋಧಿ ಚಪಾತಿ ತಿಂದರೆ ಚಪಾತಿಯಷ್ಟು ಚಪ್ಪಟೆಯಾಗುತ್ತೇವೆಂದು ಭ್ರಮೆ ನಮಗೆ ಬಂದ ಹಾಗೆ ಉಂಟು. ಎಲ್ಲರೂ ಒಂದು ಹೊತ್ತು ಗೋಧಿ ಚಪಾತಿಗೆ ಶರಣಾಗಿದ್ದೇವೆ. ರೇಷನ ಅಂಗಡಿಗೆ ಹೋದರೆ 2 ಕೆ.ಜಿ. ಗೋಧಿ ಕೊಡುವುದಿಲ್ಲವೆಂಬ ಸ್ಥಿತಿ ಇದ್ದರೆ ಸರಿಯಾಗುತ್ತದೆಯೆ? ಕೇರಳದಲ್ಲಿ 20 ಕೆ.ಜಿ. ಗೋಧಿ ಕೊಡುತ್ತಾರೆ. ನಮ್ಮಲ್ಲಿ ಹಿಂದೆ 5ರಿಂದ 7 ಕೆ.ಜಿ.ವರೆಗೆ ಕೊಡುತ್ತಿದ್ದರು, ಈಗ ಕೇವಲ 2 ಕೆ.ಜಿ.ಗೆ ಸೀಮಿತಗೊಳಿಸಿದ್ದಾರೆ. ಇದನ್ನು ಬದಲಾಯಿಸಿ ಜನರು ಅಪೇಕ್ಷಿಸುವಷ್ಟು ಗೋಧಿ ಸಿಗುವಂತೆ ಮಾಡಬೇಕು. ಈ ದೇಶದಲ್ಲಿ ಗೋಧಿ ಬೆಳೆ ಚೆನ್ನಾಗಿದೆ.

ಅಧ್ಯಕ್ಷರು: ಕಾಣಿ ಸಿಗುತ್ತಿದೆಯೆ?

ಶ್ರೀ ಕುಂಬಳೆ ಸುಂದರ್‌ರಾವ್: ಬರೀ ಕಾಣಿ ಸಿಕ್ಕಿ ಏನು ಪ್ರಯೋಜನ? ಗೋಧಿ ಸಿಕ್ಕಿದರೆ ಜೊತೆಯಾಗುತ್ತದೆ. ಗೋಧಿ ಕಾಣೆಯಾಗಿದೆ, ಬರೀ ಕಾಣಿ ಉಳಿದಿದೆ.

ಶ್ರೀ ಡಿ. ಮಂಜುನಾಥ್: ಮಾನ್ಯ ಅಧ್ಯಕ್ಷರೆ, ಈಗ ಮಾನ್ಯ ಸದಸ್ಯರು ಗೋಧಿ ಪ್ರಮಾಣ ಕಡಿಮೆಯಾಗುತ್ತಿದೆ ಅಂದರು. ಅದನ್ನು ಜಾಸ್ತಿ ಕೊಡಬೇಕೆಂದು ಸರ್ಕಾರ ತೀರ್ಮಾನ ಮಾಡಿದೆ. ಅವರ ಭಾವನೆಗಳೇನಿವೆ ಅವನ್ನು ಗಮನದಲ್ಲಿಟ್ಟುಕೊಂಡು ಮಾನ್ಯ ಆಹಾರ ಮಂತ್ರಿಗಳ ಜೊತೆ ಚರ್ಚೆ ಮಾಡಿ ಇದನ್ನು ಸರಿಪಡಿಸುವುದಕ್ಕೆ ಪ್ರಯತ್ನ